ಲೂಯಿಸ ವ್ಯಾಲೆಂಜುಯೇಲಾ (1938): ಅರ್ಜೆಂಟೈನಾದ ಪ್ರಸಿದ್ಧ ಕಥೆಗಾರ್ತಿ, ಪತ್ರಕರ್ತೆ, ಪ್ರಾಧ್ಯಾಪಕಿ. ಇವರ ತಂದೆ ಪಾಬ್ಲೊ ಫ್ರಾನ್ಸಿಸ್ಕೊ ವೈದ್ಯರಾಗಿದ್ದರು. ತಾಯಿ ಲುಯ್ಸಾ ಮರ್ಸಿದೆಸ್ ಲೆವಿನ್ಸನ್ ಸಾಹಿತಿಯಾಗಿದ್ದರಿಂದ ಲೂಯಿಸ ಅವರಿಗೆ ಚಿಕ್ಕ ವಯಸ್ಸಿನಲ್ಲಿಯೇ ಬೋರೆಸ್, ಕೋರ್ತಝಾರ್‌ರನ್ನು ಒಳಗೊಂಡು ದೇಶದ ಪ್ರಸಿದ್ಧ ಸಾಹಿತಿಗಳ ಒಡನಾಟ ಸಹಜವಾಗಿ ಆಯಿತು. ತನ್ನ ದೇಶದ ಸರ್ವಾಧಿಕಾರಿ ದಂಪತಿಗಳಾದ ಪೆರಾನ್ ಮತ್ತು ಈವಾ ಪೆರಾನ್ ಅವರ ಆಡಳಿತದ ಕಟು ವಿಮರ್ಶಕಿಯಾದ ಲೂಯಿಸ ಕೃತಿಗಳು ಸೆನ್ಸಾರ್‌ಗೂ ಸಿಲುಕಿದ್ದವು. ಯಾವುದೇ ಬಗೆಯ ಸರ್ವಾಧಿಕಾರವನ್ನು ವಿರೋಧಿಸುವ ರಾಜಕೀಯ ನಿಲುವು, ಸ್ತ್ರೀವಾದವನ್ನು ಕುರಿತ ವಿಭಿನ್ನ ಚಿಂತನೆ, ಭಾಷೆಯ ವಿಶಿಷ್ಟ ಬಳಕೆ ಹಾಗೂ ಕಲೆ, ವೈಚಾರಿಕತೆಗಳ ಅನನ್ಯ ಸಂಯೋಜನೆಯು ಲೂಯಿಸ ಅವರ ಬರವಣಿಗೆಯ ವಿಶಿಷ್ಟ ಲಕ್ಷಣಗಳಾಗಿವೆ.

(ಸುಮ್ಮನೆ ಯೋಚನೆ ಮಾಡಿದರೆ, ಒಂದೇ ಒಂದು ಕ್ಷಣ ದುರಾಸೆಯ ರೋಗದಿಂದ ಆಚೆ ಬಂದು, ಒಂದು ಸ್ವಿಚ್ ಒತ್ತಿದ್ದರೆ, ಅವನು ಇಡೀ ಊರಿನ ಬಾಯಾರಿಕೆಯನ್ನು ತಣಿಸಬಹುದಿತ್ತು.)

ಅವನ ಎದೆ ಮೇಲೆ, ಆ ಭಾನುವಾರ ಒಂಚೂರು ನೀಲಿ ಕಲೆ ಉಳಿಯಿತು, ಅವತ್ತು ಪಾಮ್ ಭಾನುವಾರ – ಅದೂ ಬಹುಪಾಲು ಅವನ ಬಿಳಿ ಅಂಗಿ ಹಿಂದೆ ಮರೆಯಾಗಿತ್ತು. ಅಷ್ಟೇ.

ಮತ್ತು ಹಾಗೇ ಒಂದು ವಾರ ಕಳೆಯಿತು:

**ಸೋಮವಾರ:** ನಾನು ಕಷ್ಟಪಟ್ಟು ಉಳಿಸಿದ್ದ (ಹೇಗೆ ಅಂತ ಕೇಳಬೇಡಿ) ಹತ್ತು ಪೆಸೋ ಅವನಿಗೆ ಕೊಟ್ಟೆ. ನಮ್ಮನೆ ನಲ್ಲಿಯಲ್ಲಿ ಇಷ್ಟೇ ಇಷ್ಟು ನೀರು ಬಂತು, ಅದರಿಂದ ನಾನು ಸಾಕಿದ್ದ ಮೂರು ಟರ್ಕಿ ಕೋಳಿ ಮತ್ತು ಪಕ್ಕದ ಮನೆಯವರ ಹಂದಿಯನ್ನು ಬಾಯಾರಿಕೆಯಿಂದ ಸಾಯದ ಹಾಗೆ ಕಾಪಾಡೋದು ಸಾಧ್ಯವಾಯ್ತು.

**ಮಂಗಳವಾರ:** ಅವತ್ತು ಪ್ರವಾಸಿಗಳು ಹೊರಟು ಹೋಗಿದ್ರು. ನನ್ನ ಹತ್ರ ಒಂದೇ ಒಂದು ಪೆಸೋ ಕೂಡಾ ಇರಲಿಲ್ಲ. ಆದರೂ ಮನುಷ್ಯನ ಗುಣ ದೊಡ್ಡದು. (ದೌರ್ಬಲ್ಯ, ದೌರ್ಬಲ್ಯ, ದೌರ್ಬಲ್ಯ!) ಅವನು ಅವತ್ತೂ ನೀರು ಬಿಟ್ಟ. ನಾನು ಅದರಿಂದ ಚಡ್ಡಿ ಬನೀನು ಒಗೆದೆ.

**ಬುಧವಾರ:** ಮೌನದಲ್ಲಿ ನಾನು ನಮ್ಮನೆ ಗೋಡೆಗಳಿಗೆ ನೀಲಿಬಣ್ಣ ಹಚ್ಚೋ ಕೆಲಸ ಮುಂದುವರಿಸಿದೆ. ಮಧ್ಯಾಹ್ನ ಮುಗಿಯೋ ಹೊತ್ತಿಗೆ ಅವನನ್ನು ನೋಡೋಣ ಅಂತ ಹೋದೆ. ನೀರು ಬಿಡುವ ವ್ಯಕ್ತಿಯ ಎರಡೂ ತೋಳುಗಳು, ಎದೆ ಮತ್ತು ಬೆನ್ನಿನ ಒಂದು ಭಾಗ ನೀಲಿಯಾಗಿತ್ತು.

**ಮಾಂಡಿ ಗುರುವಾರ:**[2] ಅವತ್ತು ನಾವೆಲ್ಲಾ ಅಂಗಳದಲ್ಲಿ 'ಲಾಸ್ಟ್ ಸಪ್ಪರ್' ದೃಶ್ಯ ಅಭಿನಯವಾಗುವುದನ್ನು ಕಾಯ್ತಾ ನಿಂತಿದ್ದೆವು. ಏನೂ ಪ್ರಯೋಜನವಾಗಲಿಲ್ಲ. ಈ ವಿನಯಪೂರ್ವಕ ದೃಶ್ಯವನ್ನು ತೋರಿಸೋಕೆ ಬೇಕಾಗೋವಷ್ಟು ನೀರು ಕೂಡಾ ಇಲ್ಲವಾ? ಇದು ನನ್ನ ಆಲೋಚನೆಯಲ್ಲ. ಗೇಟಿನ ಹತ್ತಿರ ವಾಹನದಿಂದ ಇಳಿದು ಬಂದ ಯಾರೋ ಒಬ್ಬರು ಹೇಳಿದ್ದು: 'ಹೌದು. ಇದು 'ಕೊನೇ ಊಟ'ವೇ ಇರಬಹುದು. ಆದರೆ ಆ ಊಟ ಮಾಡಿದ ಮೇಲೂ ಪಾತ್ರೆ ತೊಳೀಬೇಕು. ಅದಕ್ಕೆ ನೀರು ಬೇಕಲ್ಲ? ಸ್ನೇಹಿತರೆ, ಈ ರಾತ್ರಿ ಯಾವ ಪ್ರದರ್ಶನವೂ ಇರೋದಿಲ್ಲ. ನೀವೆಲ್ಲ ಮನೆಗೆ ಹೋಗಬಹುದು.'

**ಶುಭ ಶುಕ್ರವಾರ:** ನಾವು ಇವತ್ತು ಶಿಲುಬೆ ಹೊತ್ತ ಏಸುಪ್ರಭು ಹೋದ ಹಾದಿಯಲ್ಲಿ ಹೋದೆವು. ಲೆಕ್ಕಾಚಾರದ ಪ್ರಕಾರ ಮೆರವಣಿಗೆ, ಪ್ರಾರ್ಥನೆ, ಹಾಡುಗಳು ಎಲ್ಲಾ ಇದ್ದವು. ಅದರ ಜೊತೆಗೆ ಒಣಗಿದ

---

2. **ಮಾಂಡಿ ಗುರುವಾರ:** ಕ್ರಿಸ್ತನು ತನ್ನ ಶಿಷ್ಯರ ಜೊತೆಯಲ್ಲಿ ಸಂಭ್ರಮಿಸಿದ ಕೊನೆಯ ಹಬ್ಬವನ್ನು ಇದು ಸಂಕೇತಿಸುತ್ತದೆ. ಈ ದಿನ ಕ್ರಿಸ್ತನು ಊಟದ ವೇಳೆ ತನ್ನ ಶಿಷ್ಯರ ಪಾದಗಳನ್ನು ತೊಳೆದನೆಂದು ನಂಬಲಾಗುತ್ತದೆ. 'ಮಾಂಡಿ'ಯು ಲ್ಯಾಟಿನ್ ಪದವಾದ 'ಮಾಂಡೇಟಮ್'ನಿಂದ ಹುಟ್ಟಿದೆ, ಇದರ ಅರ್ಥ 'ದೈವಾಜ್ಞೆ' ಎಂದು.